ಬೆಂಗಳೂರು ಷಹರ್ ಮ್ಯುನಿಸಿಪ್ಯಾಲಿಟ್ಟಿ.

ಸರಟಿಫಿಕೇಟ್.

ನಂ. 608.

ತಾರೀಖು 10ನೇ ಮಾರ್ಚಿ 1885.

ಇದರಿಂದ ಸರಟಿಫೈ ಮಾಡುವದೇನಂದರೆ, ವೀತಾರಾಮಯ್ಯನ,ಕೊಳದ ಸಮೀಪದಲ್ಲಿಯೂ ಮೈಸೂರು ಸ್ಟೇಟ್ ರೈಲ್ವೆ ಇಲಾಖಾ ಸ್ಟಾಫ್‌ಕ್ವಾರಟರಿನ ಬಾಜೂದಲ್ಲಿಯೂ ಇರುವ ಹಾಲಿ ಸ್ಮಶಾನಘಟ್ಟನ್ನು ಈಗಿನಂತೆಯೆ ಉಳಿಸಲ್ಪಟ್ಟರೆ ಅದರ ಆಜೂಬಾಜೂದಲ್ಲಿನ ನಿವಾಸಸ್ಥರ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡತಕ್ಕಂಥಾ ಸ್ಥಿತಿಯಲ್ಲಿರುವದರಿಂದ ಹಾಲಿ ಇರತಕ್ಕ ಸ್ಮಶಾನಘಟ್ಟದಿಂದ ಆಚಿಗೆ ಸ್ವಲ್ಪದೂರದಲ್ಲಿಯೇ ಮುರದೆಗಳ ದರ್ಗಾ ಮತ್ತು ಸುಡುವ ಬಯ್ಲೆ ಈಗಿರುವದಕ್ಕೆ ಬದಲಾಗಿ ಬೇರೆ ಸ್ಮಶಾನಘಟ್ಟನ್ನು ನಿಯಮಿಸಲ್ಪಟ್ಟಿರುತ್ತೆ. ಇದರಿಂದ ಯಚ್ಚರಿಸುವದೇನಂದರೆ, ಈ ಸರ್ಟಿಫಿಕೇಟ್ ತಾರೀಖು ನೊದಲು ಯಾರಹುತಿಂಗಳು ಕಳೆದ ತರುವಾಯ ಯಾವ ಮನುಷ್ಯನೇ ಆಗಲೀ ಸದರೀ ವೀತಾರಾಮಯ್ಯನ ಕೊಳದ ಸಮೀಪದಲ್ಲಿಯೂ ರೈಲ್ವೇ ಸ್ಟಾಫ್‌ಕ್ವಾರಟರಿನ ಬಾಜೂವಲ್ಲಿಯೂ ಯಿರತಕ್ಕ ಮೇಲೆ ಕಂಡ ಸ್ಮಶಾನಘಟ್ಟದಲ್ಲಿ ಯಾವ ಹೆಣವನ್ನಾದರು ಸುಟ್ಟ್ಯಾಗ್ಯೂ ಹೂಡಾಗ್ಯೂ ಅಂಥಾ ಪ್ರತೀ ಮನುಷ್ಯನೂ 1871ನೇ ಇಸವಿ ಬೆಂಗಳೂರು ಮ್ಯುನಿಸಿಪಲ್ ರಗ್ಯುಲೇಷನಿನ 190ನೇ ಸೆಕ್ಷನಿನಲ್ಲಿ ವಿಧಿಸಲಟ್ಟ ದಂಡಕ್ಕೆಗೆ ಗುರಿಯಾಗತಕ್ಕದ್ದು.

ಯೆ. ಶ್ರೀನಿವಾಸಾಚಾರ್,
ವೈಸ್ ಪ್ರೆಸಿಡೆಂಟ್, ಷಹರ್ ಮ್ಯುನಿಸಿಪಲ್ ಕಮ್ಮಿಷರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿ|| ಸಬ್‌ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 134.

ಮೃತಪಟ್ಟ ಮಲ್ಲಾಮೇಸ್ತ್ರಿರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಚಿತ್ರದುರ್ಗ ತಾಲ್ಲೂಕು ಗಾರೆಹಟ್ಟಿ ಮುರಿಗೆಪ್ಪ, ಮೃತಪಟ್ಟ ಸದರೀ ಮಲ್ಲಾ ಮಲ್ಲಾಮೇಸ್ತ್ರೀರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿತ್ರದುರ್ಗ ತಾಲ್ಲೂಕು ಗಾರೆಹಟ್ಟಿ ಸ್ಥಳದ ಮುರಿಗೆಪ್ಪನವರು ಸದರೀ ಗಾರೆಹಟ್ಟಿ ವಾಸಸ್ಥರಾಗಿ ಮೃತಪಟ್ಟ ಮಲ್ಲಾಮೇಸ್ತ್ರಿರ ಜಿಂದಗಿ ಬ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಯ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುರಿಗೆಪ್ಪನವರ ಅರ್ಜೀಯನ್ನು 1885ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಾಮೇಸ್ತ್ರಿರ ಆಸ್ತಿಗೆ ಹಕ್ಕುದಾರರಾದ ವಿಶ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಏಪ್ರೆಲ್ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್‌ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 92.

ಮೃತಪಟ್ಟ ಅಂಡರ್ ಸೆಕ್ರಟೇರಿ ಮೆ|| ಶ್ರೀನಿವಾಸಯ್ಯಂಗಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಮೈಸೂರು ಸ್ಟೇಟ್‌ರೈಲ್ವೆ ಅಸಿಸ್ಟೆಂಟ್ ಇಂಜನಿಯರ್ ಮೆ|| ಗೋವಿಂದಾಚಾರಲು, ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ಭಾವಮೈದ ಆಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರು ಸ್ಥಳದ ಸದರೀ ಗೋವಿಂದಾಚಾರಲು ಯವರು ಬೆಂಗಳೂರು

ವಾಸಸ್ಥರಾಗಿ ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 13,720 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೋವಿಂದಾಚಾರಲು ಯವರ ಅರ್ಜೀಯನ್ನು 1885ನೇ ಇಸವಿ ಜೂನ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಅಧೆ.

1885ನೇ ಇಸವಿ ಅರ್ಜೀ ನಂಬರ್ 154.

ಮೃತಪಟ್ಟ ಬೆಂಕಟ್ಟಪ್ಪ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ನಂಜಪ್ಪ ವೊರಫ್ ಮರಿಯಂಣ ಮೃತಪಟ್ಟ ಸದರೀ ಬೆಂಕಟ್ಟಪ್ಪಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹಿಗ್ಗಡದೇವನಕೋಟೆ ತಾ॥ ಸರಗೂರು ಹೋಬಳಿ ಸರ್ವಮಾನ್ಯ ಬಿಡಗಲುಸ್ಥಳದ ಸದರೀ ನಂಜಪ್ಪ ವೊರಫ್ ಮರಿಯಂಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಬೆಂಕಟ್ಟಪ್ಪ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜಪ್ಪ ವೊರಫ್ ಮರಿಯಂಣನ ಅರ್ಜೀಯನ್ನು 1885ನೇ ಇಸವಿ ಜುಲೈತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೆಂಕಟ್ಟಪ್ಪ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಅರ್ಜೀ ನಂಬರ್ 155.

ಮೃತಪಟ್ಟ ಚನ್ನಕಟ್ಟಪ್ಪ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಚನ್ನಕಟ್ಟಯ್ಯ, ಮೃತಪಟ್ಟ ಸದರೀ ಚನ್ನಕಟ್ಟಪ್ಪಗೆ ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ಯಳಂದೂರು ಹಸಬು ಮತ್ತು ಚಾಮರಾಜನಗರ ತಾಲ್ಲೂಕು ನಾಗವಳ್ಳಿ ಸ್ಥಳದ ಚನ್ನಕಟ್ಟಯ್ಯ ಸದರೀ ವಾಸಸ್ಥನಾಗಿ ಮೃತಪಟ್ಟ ಚನ್ನಕಟ್ಟಯ್ಯ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚನ್ನಕಟ್ಟಯ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಕಟ್ಟಯ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಅರ್ಜೀ ನಂಬರ್ 158.

ಮೃತಪಟ್ಟ ಗುರುಕಾಂತಕಟ್ಟಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ನಂಜುಂಡಕಟ್ಟಿ ಮೃತಪಟ್ಟ ಸದರೀ ಗುರುಕಾಂತಕಟ್ಟಿಗೆ ಅಳಿಯ ಆಗಬೇಕೆಂಬ ಹಕ್ಕುದಾರೀ ಮೇಲೆ ಯಳಂದೂರು ಹಸಬು ಸ್ಥಳದ ಸದರೀ ನಂಜುಂಡಕಟ್ಟಿಯು ಸದರೀ ವಾಸಸ್ಥನಾಗಿ ಮೃತಪಟ್ಟ ಗುರುಕಾಂತಕಟ್ಟಿ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜುಂಡಕಟ್ಟಿ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುಕಾಂತಕಟ್ಟಿ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಅಧೆ.

1885ನೇ ಇಸವಿ ಅರ್ಜೀ ನಂಬರ್ 182.

ಮೃತಪಟ್ಟ ಕೇಶವಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಅಗ್ರಹಾರದ ಸುಬ್ಬರಾವ್, ಮೃತಪಟ್ಟ ಸದರೀ ಕೇಶವಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಸುಬ್ಬರಾವ್ ಸದರೀ ವಾಸಸ್ಥನಾಗಿ ಮೃತಪಟ್ಟ ಕೇಶವಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ,

ಸದರೀ ದರಖಾಸ್ತುದಾರನಾದ ಸುಬ್ಬರಾವ್ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೇಶವಯ್ಯನ ಆಸ್ತಿಗೆ ಹಕ್ಕುದಾರರಾದ ವಿಷ್ಣ ರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 191.

ಮೃತಪಟ್ಟ ಸಾಲಪ್ಪಿ ವೆಂಕಟರಮಣಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಲಕ್ಷ್ಮಮ್ಮ, ಮೃತಪಟ್ಟ ಸದರೀ ವೆಂಕಟರಮಣಯ್ಯಗೆ ತಂಗಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಲಕ್ಷ್ಮಮ್ಮ ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಮ್ಮನ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಯ್ಯನ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಏಪ್ರೆಲ್ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಕಾಗಿದೆ.

ವಿ. ಆರ್. ನರಸಿಂಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಪ್ರಸಿದ್ಧ ಪತ್ರಿಕೆ.

ಮೈಸೂರು ಷಹರಿಗೆ ಕೀರಿದ ಕುಕ್ಕರಹಳ್ಳಿ ತಲುವಿಗೆ ನೀರು ಬರತಕ್ಕ ಕಾಲ್ವೆಯನ್ನು ಬಡಾಯಿಸತಕ್ಕ ಕೆಲಸಕ್ಕಾಗಿ ಯಿಷ್ಟವುಳ್ಳವರು ದರಖಾಸ್ತುಗಳನ್ನು ಕೊಡಬಹುದು.

2. ಇದಕ್ಕೆ ಸಂಬಂಧಪಟ್ಟ ಅಂದಾಜಾ ನಕ್ಷೆ, ದರಗಳ ತಪಸೀಲು ಮತ್ತು ಷರತ್ತುಗಳು ಇವುಗಳನ್ನು ತಿಳಿದುಕೊಳ್ಳತಕ್ಕವರು ಪ್ರತಿನಿತ್ಯವೂ ಹಗಲು 11 ಗಂಟೆಲಾಯಿತು 4 ಗಂಟೆವಳಗ್ಗಾಗಿ ಮೈಸೂರು ಡಿವಿಜನ್ ಯಜ್ಜಿಕ್ಯೂಟಿವ್ ಇಂಜನೀರು ಆಫೀಸಿಗೆ ಹಾಜರಾಗಿ ತಿಳಿದು ಕೊಳ್ಳಬಹುದು.

3. ಇದರ ಕೆಳಗೆ ತೋರಿಸಿ ಇರುವ ನಮೂನೆ ಅನುಸರಿಸಿ ಕಳುಹಿಸಬೇಕಾವ ಟೆಂಡರ್‌ಗಳನ್ನು ಮೊಹರ್ ಮಾಡಿ ಕಳುಹಿಸತಕ್ಕದ್ದು. ಹೀಗೆ ಕಳುಹಿಸಬೇಕಾವ ಟೆಂಡರ್‌ಗಳಿಗೆ ಸ॥ 1885ನೇ ಇಸವಿ ಏಪ್ರೆಲ್ ತಾರೀಖು 25ರವರೆಗೆ ಅವಧಿ ಇರುತ್ತೆ.

ಟೆಂಡರ್‌ಗಳ ನಮೂನೆ.

ಸ॥ 1885 ನೇ ಮತ್ತು ಂ ದರಗಳ ತಪಸೀಲ್ ಪಟ್ಟಿಯಲ್ಲಿ ನಮೂದಿಸಿ ಯಿರುವ ಸರ್ಕಾರ್ ದರಗಳಿಗಿಂತಲೂ ಕೇಕಡಾ ಕಮ್ಮಿಯಾಗಿ ಸ್ಪೆಸಿಫಿಕೇರ್ಷ ಮತ್ತು ನಕ್ಷೆ ಅನುಸರಿಸಿ ನ್ನು ನಡಿಸಲು ಯಿಷ್ಟವುಳ್ಳವನಾಗಿದ್ದೇನೆ.

ಕಂಟ್ರಾಕ್ಟುದಾರನ ಸೈ॥.

4. ಟೆಂಡರುಗಳ ವೈಕಿ ಯಾವದನ್ನಾದರೂ ಮಂಜೂರ್ ಮಾಡತಕ್ಕದ್ದು ಸೂಪರಿಂಟೆಂಡಿಂಗ್ ಯಿಂಜನೀರು ಸಾಹೆಬರವರನ್ನು